ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋ.ಇ. ನಂ.2, ಉತ್ತರ ಉಪವಿಭಾಗ ಬೆಂಗಳೂರು
ಲೋ.ಇ. ಆಫೀಸ್ ಕಟ್ಟಡ 5ನೇ ಮಹಡಿ
ಕೆ.ಆರ್.ವೃತ್ತ ಬೆಂಗಳೂರು-01

(ಲೋಕೋಪಯೋಗಿ ಇಲಾಖೆ)

ದೂರವಾಣಿ: 080-22114582
ಇ ಮೇಲ್: nsdpwd@gmail.com

ಸಂಖ್ಯೆ: ಸಕಾಅ:ಲೋಇ:ನಂ.2:ಉಉವಿ:ಬೆಂ:ಕಇಂ:2025-26/1೦೬೬ ದಿನಾಂಕ: ೨೪/೦೩/೨೦೨೬

ಇವರಿಗೆ,
The Principal,
The Academic City Foundation,
Venkatapura,
Sondekoppa Road,
Nelamangala.
Bangalore 562123.

ಮಾನ್ಯರೇ,

ವಿಷಯ : The Academic City Foundation, ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ

ಉಲ್ಲೇಖ : 1) The Academic City Foundation, ರವರ ಪತ್ರ ದಿ: 16-03-2026.
2) ಸರ್ಕಾರದ ಆದೇಶ ಸಂಖ್ಯೆ: ಲೋ.ಇ/59/ಬಿ.ಇ.ಡಿ/2019/ದಿನಾಂಕ: 07-05-2022.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, The Academic City Foundation, Venkatapura, Sondekoppa Road, Nelamangala, Bangalore 562123, ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1)ರ ತಮ್ಮ ಪತ್ರದಲ್ಲಿ ಕೋರಲಾಗಿರುತ್ತದೆ. ಹಾಗೂ ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಅದರಂತೆ, ಶಾಲಾ ಕಟ್ಟಡವನ್ನು ದಿನಾಂಕ: 20-03-2026 ರಂದು ಉಪವಿಭಾಗದ ವತಿಯಿಂದ The Academic City Foundation, ಮುಖ್ಯಸ್ಥರ ಉಪಸ್ಥಿತಿಯಲ್ಲಿ ಪರಿವೀಕ್ಷಣೆ ನಡೆಸಲಾಗಿರುತ್ತದೆ. ಹಾಗೂ ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ನಗರ ಪ್ರದೇಶದಲ್ಲಿನ ಶಾಲೆಯ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ರೂ. 5,000/- ಗಳ ಮೊತ್ತವನ್ನು The Assistant Executive Engineer, North Sub-division, K.R. Circle, Bangalore ರವರ ಹೆಸರಿನಲ್ಲಿ ಖಜಾನೆ-2 ಮುಖಾಂತರ ಪಾವತಿಸಿ ಚಲನ್ ಸಂಖ್ಯೆ: CR0326005900352911 ನ್ನು ಈ ಕಛೇರಿಗೆ ಸಲ್ಲಿಸಿರುತ್ತೀರಿ.

- ಸದರಿ ಶಾಲಾ ಕಟ್ಟಡವನ್ನು The Academic City Foundation, Venkatapura, Sondekoppa Road, Nelamangala, Bangalore 562123, ರಲ್ಲಿ ನಿರ್ಮಿಸಿರುವುದು ಕಂಡು ಬಂದಿರುತ್ತದೆ.
- ಕಟ್ಟಡಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ Keystone Engineering Solution-QC Lab, No.6, Corner Building, Ground & 1St Floor, 3rd Main Ganganagar, Mariyappanapalya, Bangalore 560056, ರವರು Rebound hammer test & Ultra Sonic test ಕೈಗೊಂಡು ವರದಿಯನ್ನು ನೀಡಿರುತ್ತಾರೆ.

EMERALD INTERNATIONAL SCHOOL
Aff. No.: 831021
School Code 45969
BENGALURU

PRINCIPAL
EMERALD INTERNATIONAL SCHOOL
CBSE Affiliation No:831021
School Code: 45989
NELAMANGALA, BENGALURU

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ Keystone Engineering Solution-QC Lab, No.6, Corner Building, Ground & 1St Floor, 3rd Main Ganganagar, Mariyappanapalya, Bangalore 560056, ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಸದರಿ ವರದಿಗಳನ್ನು ಹಾಗೂ ಕಟ್ಟಡವನ್ನು ಪರಿಶೀಲಿಸಲಾಗಿ ಕಟ್ಟಡದ ಆರ್.ಸಿ.ಸಿ. ಕಂಬ, ತೊಲೆ ಹಾಗೂ ಛಾವಣಿಯಲ್ಲಿ ಯಾವುದೇ ಬಿರುಕುಗಳು ಕಂಡು ಬಂದಿರುವುದಿಲ್ಲ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಹಾಗೂ ಕಟ್ಟಡವು Structural Sound Condition ಇರುವುದಾಗಿ ಪರೀಕ್ಷೆ ವರದಿಗಳು ಕಂಡು ಬಂದಿರುವುದರಿಂದ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ಅನುಸರಿಸಲು ಸೂಚಿಸಲಾಗಿದೆ.

- ❖ ಅಗ್ನಿಶಾಮಕ ಇಲಾಖೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ / ಪ್ರಮಾಣ ಪತ್ರವನ್ನು ನಿಯಮಾವಳಿಗಳ ಅನ್ವಯ ನಿಗದಿತ ಸಮಯಗಳಲ್ಲಿ ಪಡೆಯತಕ್ಕದ್ದು.
- ❖ ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ನಿರ್ವಹಣೆ ಮಾಡತಕ್ಕದ್ದು.
- ❖ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ಆದ್ಯತೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.
- ❖ ಕಟ್ಟಡದ ಸದೃಡತೆಗೆ ಧಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದ್ದಲ್ಲ. ಅನುಮತಿ ಪಡೆಯದೇ ಕೈಗೊಂಡಲ್ಲಿ ಪ್ರಮಾಣ ಪತ್ರವು ಆ ಕೂಡಲೇ ರದ್ದಾಗುತ್ತದೆ.
- ❖ ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲೆ ತಿಳಿಸಲಾಗಿರುವ ಷರತ್ತುಗಳಿಗೊಳಪಟ್ಟು, The Academic City Foundation, Venkatapura, Sondekoppa Road, Nelamangala, Bangalore 562123, ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು 2026-27ನೇ ಸಾಲಿನಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ಲೋಇ., ನಂ.2, ಉತ್ತರ ಉಪವಿಭಾಗ, ಬೆಂಗಳೂರು.

EMERALD INTERNATIONAL SCHOOL
Aff. No.: 831021
School Code: 45969
BENGALURU

PRINCIPAL
EMERALD INTERNATIONAL SCHOOL
CBSE Affiliation No:831021
School Code: 45989
NELAMANGALA, BENGALURU